ಆ) ದಿನಾಂಕ 25-12-94ರಂದು ರಾತ್ರಿ, ಶ್ರೀಗಂಧ ಕಳ್ಳ ಸಾಗಾಣಿಕೆ ಆಗುತ್ತದೆ ಎಂಬ ಮಾಹಿತಿಯ ಆಧಾರದ ಮೇಲೆ, ಶಿವಮೊಗ್ಗ ವನ್ಯಜೀವಿ ವಿಭಾಗದ ಅರಣ್ಯ ಸಿಬ್ಬಂದಿಯವರು, ವೀರಣ್ಣನ ಬೆನವಳ್ಳಿಯ ಹತ್ತಿರ ಕಾಯುತ್ತಿದ್ದಾಗ, ಅಲ್ಲಿಗೆ ಬಂದ ಅಂಬಾಸಿಡರ್ ಕಾರನ್ನು ಸಿಬ್ಬಂದಿಯವರು, ನಿಲ್ಲಿಸಲು ಸೂಚಿಸಿದರೂ. ಅದರ ಚಾಲಕ ನಿಲ್ಲಿಸದೇ ಓಡಿಸಿಕೊಂಡು ಹೋಗಿದ್ದರಿಂದ, ಸಿಬ್ಬಂದಿಯವರು ಸದರಿ ವಾಹನವನ್ನು ಹಿಂಬಾಲಿಸಿ, ಗಾಳಿಯಲ್ಲಿ ಒಂದು ಸುತ್ತು ಗುಂಡು ಹಾರಿಸಿ, ಕಾರನ್ನು ತಡೆದು ತಪಾಸಣೆ ಮಾಡಲಾಯಿತು.. ಕಾರಿನಲ್ಲಿ ಯಾವುದೆ ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆಯು ಪತ್ತೆಯಾಗಲಿಲ್ಲ. ಕಾರಿನ ಚಾಲಕನ ಅನುಮಾನಾಸ್ಪದ ನಡೆವಳಿಕೆಯೇ ಈ ಘಟನೆಗೆ ಕಾರಣವಾಯ್ತು.

ಇ) ಯಾರಿಗೂ ಯಾವ ವಿಧವಾದ ಹಾನಿಯು ಉಂಟಾಗಿರುವುದಿಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

**ಹೊಸನಗರ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳ ಸಂಖ್ಯೆ ಕುರಿತು**

788 - ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಹೊಸನಗರ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು?*

*ಆ) ಅವುಗಳಲ್ಲಿ ವೈದ್ಯರು ಇಲ್ಲದೆ ಖಾಲಿ ಇರುವ ಆಸ್ಪತ್ರೆಗಳು ಎಷ್ಟು ಹಾಗೂ ಎಷ್ಟು ದಿನಗಳಿಂದ ಖಾಲಿ ಇವೆ?*

*ಇ) ಈ ಖಾಲಿ ಇರುವ ವೈದ್ಯರುಗಳ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 10

ಆ) ಪ್ರಾಥಮಿಕ ಆರೋಗ್ಯ ಕೇಂದ್ರ :

| | | |
|---|---|---|
| ಯದೂರು | - | ಜುಲೈ 1992 ರಿಂದ |
| ಕೂಡೂರು | - | ಜೂನ್ 1993 ರಿಂದ |
| ಸಂಪೇಕಟ್ಟೆ | - | 1990 ರಿಂದ |
| ಸೋನಲ್ | - | ಮೇ 1992 ರಿಂದ |

ಇ) ದಿ: 10-2-95ರ ಅಧಿಸೂಚನೆಯಲ್ಲಿ ಈ ಹುದ್ದೆಗಳನ್ನು ಗುತ್ತಿಗೆ ಆಧಾರದ ವೈದ್ಯರುಗಳಿಂದ ತುಂಬಲಾಗಿದೆ.

**ಶಿವಮೊಗ್ಗ ಜಿಲ್ಲೆಯಲ್ಲಿರುವ ಕ್ರೀಡಾ ತರಬೇತಿದಾರರ ಬಗ್ಗೆ**

792 - ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಜನ ಕ್ರೀಡಾ ತರಬೇತುದಾರರಿದ್ದಾರೆ?*

*ಆ) ತಾಲ್ಲೂಕಿಗೊಬ್ಬರಂತೆ ಕ್ರೀಡಾ ತರಬೇತುದಾರರನ್ನು ನಿಯುಕ್ತಿಗೊಳಿಸುವ ಆಲೋಚನೆ ಸರ್ಕಾರಕ್ಕಿದೆಯೇ? ಇದ್ದರೆ ಯಾವಾಗಿನಿಂದ ನಿಯುಕ್ತಿಗೊಳ್ಳಲಾಗುವುದು?*